# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ
(ಯೋಜನೆ ಕೇಂದ್ರ – 5)
ಎನ್.ಆರ್ ಚೌಕ, ಬೆಂಗಳೂರು
ದಿನಾಂಕ: 19.01.2017

## ಆಡಳಿತಾತ್ಮಕ ಅನುಮೋದನೆ

**ವಿಷಯ:** "Comprehensive Development of Church Street in Bangalore City as per Tender SURE Guidelines" ಕಾಮಗಾರಿಯ ಯೋಜನೆಯ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**
1. ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜನೆ ಮಾಡಿರುವ ಆದೇಶ ಸಂಖ್ಯೆ: ಬಿ(12)ಪಿಆರ್/394/2016-17, ದಿನಾಂಕ: 05.05.2016
2. ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್‌ಎಫ್‌ಸಿ/2016 (ಭಾಗ-1), ದಿನಾಂಕ: 21.06.2016.
3. ಸರ್ಕಾರದ ಆದೇಶ ಸಂಖ್ಯೆ: ನಅಇ/836/ಎಂಎನ್‌ವೈ/2016, ದಿನಾಂಕ: 04.01.2017.

* * * *

**ಪ್ರಸ್ತಾವನೆ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ ರೂ. 7300.00 ಕೋಟಿಗಳ ಅನುದಾನದ ಅಡಿಯಲ್ಲಿ, ಸದರಿ ಆದೇಶದಲ್ಲಿ ತಿಳಿಸಿರುವ ಅಧಿಕಾರಯುಕ್ತ ಸಮಿತಿಯ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ಈ ಕಾಮಗಾರಿಯ ಅಂದಾಜುಪಟ್ಟಿಯ ತಾಂತ್ರಿಕ ಪರಿಶೀಲನೆ ನಡೆಸಿ ಟೆಂಡರ್ ಆಹ್ವಾನಿಸುವ ಸಲುವಾಗಿ Draft Tender Schedule ನ್ನು ಅನುಮೋದಿಸಲಾಗಿತ್ತು. ಈ ಸಂಬಂಧ ನಡೆದ ಟೆಂಡರ್ ಪ್ರಕ್ರಿಯೆ ಭಾಗವಾಗಿ, "Comprehensive Development of Church Street in Bangalore City as per Tender SURE Guidelines" ಕಾಮಗಾರಿಗೆ ಒಟ್ಟು ರೂ. 8.00 ಕೋಟಿಗಳ ಮೊತ್ತದ ಯೋಜನೆಗೆ ಉಲ್ಲೇಖ (3) ರ ಸರ್ಕಾರದ ಆದೇಶದ ದಿನಾಂಕ: 04.01.2017 ರಲ್ಲಿ ಆಡಳಿತಾತ್ಮಕ ಹಾಗೂ ಟೆಂಡರ್ ಅನುಮೋದನೆ ನೀಡಲಾಗಿರುತ್ತದೆ. ಈ ಸ್ಥಿರೀಕರಣದ ಹಿನ್ನೆಲೆಯಲ್ಲಿ, ಉಲ್ಲೇಖ(1) ರಲ್ಲಿ ಮಾನ್ಯ ಆಯುಕ್ತರು ನೀಡಿರುವ ಅಧಿಕಾರ ಪ್ರತ್ಯಾಯೋಜನೆಯಂತೆ ಸದರಿ ಕಾಮಗಾರಿಗೆ ಈ ಕೆಳಗಿನಂತೆ ಘಟನೋತ್ತರ ಅನುಮೋದನೆ ಟಿಪ್ಪಣಿ ನೀಡಬೇಕಾಗಿರುತ್ತದೆ.

ಆದ್ದರಿಂದ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, "Comprehensive Development of Church Street in Bangalore City as per Tender SURE Guidelines" ಕಾಮಗಾರಿ ಯೋಜನೆಯ ಅಂದಾಜುಪಟ್ಟಿಯನ್ನು ರೂ.8.00 ಕೋಟಿಗಳ (ರೂಪಾಯಿ ಎಂಟು ಕೋಟಿ ಮಾತ್ರ) ಮೊತ್ತದ ಕಾಮಗಾರಿಗೆ ಉಲ್ಲೇಖ (1) ರ ಮಾನ್ಯ ಆಯುಕ್ತರು ಪ್ರತ್ಯಾಯೋಜನೆ ಮಾಡಿರುವ ಆದೇಶದಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆಡಳಿತಾತ್ಮಕ ಅನುಮೋದನೆಯನ್ನು ಈ ಕಛೇರಿಯ ಆಡಳಿತಾತ್ಮಕ ದಾಖಲಾತಿ ವಹಿಯ ಸಂಖ್ಯೆ: EE(P.C-5)/ADM/AS/01/16-17, ದಿನಾಂಕ: 19.01.2017 ರಲ್ಲಿ ನೊಂದಾಯಿಸಲಾಗಿದೆ.

19/1/17

ಕಾರ್ಯಪಾಲಕ ಅಭಿಯಂತರರು
(ಯೋಜನೆ ಕೇಂದ್ರ-5)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ